# 28. ಬಾಳೆಯಲ್ಲಿ ಗೊಂಚಲು ಚೀಲ ಆವಿಷ್ಕಾರ


ಹೆಸರು ಮತ್ತು ವಿಳಾಸ : ಶ್ರೀ ಸಿದ್ದಲಿಂಗೇಶ್ವರ ಕಲಿವಾಳ
ಗ್ರಾಮ : ಇಬ್ರಾಹಿಂಪುರ
ತಾ : ಶಿಗ್ಗಾಂವ್
ಜಿ : ಹಾವೇರಿ
ಮೊ : 9743759403


## ವಿಶೇಷ ತಾಂತ್ರಿಕತೆಗಳು



- ಬಾಳೆ ಗೊನೆಯಲ್ಲಿ ಒಂದೇ ಆಕಾರದ ಸಮನಾದ ಬಾಳೆಕಾಯಿ ಹೊಂದಲು ಗೊಂಚಲು ಚೀಲ ವಿಧಾನ ಅಳವಡಿಕೆ.

- ಈ ವಿಧಾನದಲ್ಲಿ 1 ಕಿ.ಗ್ರಾಂ. ಪ್ಲಾಸ್ಟಿಕ್ ಚೀಲದಲ್ಲಿ ಅರ್ಧ ಕಿ. ಗ್ರಾಂ. ಆಕಳ ಸಗಣಿ ಅಂದಾಜು 10 ಗ್ರಾಂ ಸಲ್ಫೇಟ್ ಆಫ್ ಪೊಟ್ಯಾಷ್, 10 ಗ್ರಾಂ ಯೂರಿಯಾ ಹಾಗೂ 100 ಮಿ.ಲೀ. ನೀರನ್ನು ಹಾಕಿ ಮಿಶ್ರಣ ಮಾಡಿ ಗೊನೆಯಲ್ಲಿರುವ ಕೊನೆಯ ಹಂತದ ಕೈಗಳನ್ನು ತೆರೆದು ಗಂಡು ಹೂ ಭಾಗವನ್ನು ಕಡಿದು ಹಾಕಿ ಗೊನೆಯ ತುದಿಗೆ ಮಿಶ್ರಣದ ಚೀಲವನ್ನು ಕಟ್ಟಬೇಕು.



- ಇದರಿಂದ ಬಾಳೆಯ ಗೊನೆಗೆ ಸಮಗ್ರವಾದ ಪೋಷಕಾಂಶಗಳು ಒದಗಿ ಬಾಳೆಗೊನೆ ಸದೃಢವಾಗಿ ಹಾಗೂ ಬಾಳೆ ಕಾಯಿಗಳು ಸಮನಾಗಿ ಬೆಳೆಯುತ್ತವೆ.



- ಈ ವಿಧಾನದಿಂದ ಬಾಳೆ ಗೊನೆಯು ಸುಮಾರು 35 ರಿಂದ 40 ಕಿ. ಗ್ರಾಂ. ತೂಗುತ್ತವೆ. ಚೀಲವನ್ನು ಬಾಳೆಗೊನೆ ತೆಗೆಯುವವರೆಗೆ ಹಾಗೆ ಇಡಬೇಕು. ತೆಗೆದ ಪ್ಲಾಸ್ಟಿಕ್ ಚೀಲಗಳನ್ನು ಮರು ಉಪಯೋಗ ಮಾಡಿಕೊಳ್ಳಬಹುದು.



- ಬಾಳೆಯಲ್ಲಿ ಭೂಮಿಯ ಮೇಲ್ಮೈ ಹೊದಿಕೆಯಾಗಿ ಕಬ್ಬು/ಗೋವಿನಜೋಳದ ರವದಿಯನ್ನು ಹೊದಿಕೆಯಾಗಿ ಹಾಕುವುದರಿಂದ ಭೂಮಿಯ ತೇವಾಂಶವನ್ನು ಕಾಪಾಡುವುದಲ್ಲದೇ ಕಳೆಗಳು ಬೆಳೆಯದಂತೆ ನೋಡಿಕೊಳ್ಳುತ್ತದೆ. ನೀರಿನ ಬಳಕೆ ಕಡಿಮೆಯಾಗಿ ಹೆಚ್ಚಿನ ಲಾಭ ಬರುತ್ತದೆ.

ಮಾಹಿತಿಯ ಮೂಲ: ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ